ದ್ರೌಪದಿಗೆ ಹೇಳುತ್ತಾನೆ. ಶಿರೋಮಣಿ ಎನ್ನುವ ಸ್ತ್ರೀಯು ದೇವರಾತ ಎನ್ನುವ ಋಷಿಯ ಪತ್ನಿ. ಈಕೆ ಅತ್ಯಂತ ಚೆಲುವೆ ಮತ್ತು ಮಹಾಪತಿವ್ರತೆ. ಈಕೆಯ ಚೆಲುವಿಗೆ ರಾಕ್ಷಸನೊಬ್ಬ ಮರುಳಾಗುತ್ತಾನೆ. ಹೇಗಾದರೂ ಮಾಡಿ ಅವಳನ್ನು ಅಪಹರಿಸಿ ಮದುವೆಯಾಗಬೇಕು ಎಂದು ಪ್ರಯತ್ನಿಸುತ್ತಾನೆ. ಅವಳ ಗಂಡನು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಅವನ ರೂಪವನ್ನು ಧರಿಸಿ ಬಂದು ಅವಳನ್ನು ಅಪಹರಿಸುತ್ತಾನೆ. ಆಕೆಯನ್ನು ದೂರದ ನಡುಗಡ್ಡೆಯಲ್ಲಿ ಬಂಧಿಸುತ್ತಾನೆ. ರಾಕ್ಷಸ ವಿವಾಹವಾಗುವುದಕ್ಕೆ ಹೆಣ್ಣನ್ನು ಅಪಹರಿಸುವುದು ಶಾಸ್ತ್ರಬದ್ಧವಾದರೂ, ಅಪಹರಿಸಿದ ಹೆಣ್ಣು ಮದುವೆಗೆ ಒಪ್ಪಿಗೆ ನೀಡುವುದು ಕಡ್ಡಾಯ (ಇದನ್ನು ಸೀತಾಪಹರಣದಲ್ಲಿಯೂ ಗಮನಿಸಬಹುದು). ಆದ್ದರಿಂದ ಇನ್ನಿಲ್ಲದಂತೆ ಆ ಶಿರೋಮಣಿಯನ್ನು ಒಪ್ಪಿಸಲು ಈ ರಾಕ್ಷಸ ಪ್ರಯತ್ನಿಸುತ್ತಾನೆ. ಅವಳು ಒಪ್ಪುವುದೇ ಇಲ್ಲ. ಕೊನೆಗೆ ರಾಕ್ಷಸನಿಗೆ ಸಹನೆ ಮೀರುತ್ತದೆ. ಒಂದು ದಿನ ಎಲ್ಲಾ ಮೌಲ್ಯಗಳನ್ನು ಗಾಳಿಗೆ ತೂರಿ ಅವಳನ್ನು ಬಲಾತ್ಕಾರ ಮಾಡಲು ಹೋಗುತ್ತಾನೆ. ಅವನ ಹಟಮಾರಿತನದಿಂದ ಸಿಟ್ಟಿಗೆದ್ದ ಶಿರೋಮಣಿ 'ನನ್ನ ಯೋನಿ ಅವನಿಗೆ ಪ್ರವೇಶ ನೀಡದಂತೆ ಕಲ್ಲಾಗಲಿ' ಎಂದು ಶಪಿಸಿಕೊಂಡು ಬಿಡುತ್ತಾಳೆ. ಋಷಿಪತ್ನಿಯಾದ ಅವಳಿಗೆ ಶಾಪ ಕೊಡುವ ಶಕ್ತಿಯಿರುತ್ತದೆ. ಆದ್ದರಿಂದ ತಕ್ಷಣ ಅವಳ ಯೋನಿಯು ಕಲ್ಲಾಗುತ್ತದೆ. ಕಾಮೋದ್ರಿಕ್ತನಾದ ರಾಕ್ಷಸ ಮುಂದುವರೆಯಲು ಸಾಧ್ಯವಾಗದೆ ರಸಭಂಗಗೊಳ್ಳುತ್ತಾನೆ. ತನ್ನ ಅಸಹಾಯಕತೆಗೆ ಸಿಟ್ಟಿಗೆದ್ದ ಅವನು ಶಿರೋಮಣಿಯ ತಲೆಯನ್ನು ಕತ್ತಿಯಿಂದ ಕಡಿಯುತ್ತಾನೆ. ನನಗನ್ನಿಸುವ ಹಾಗೆ ಶಿರೋಮಣಿಯ ತಲೆಯು ನೆಲಕ್ಕೆ ಉರುಳಿ ಬಿದ್ದರೂ, ದೇಸಾಯರ ಕಥೆಯ ಮಗಳಂತೆ ಆ ಮುಖದಲ್ಲಿ 'ವಿಜಯಾನಂದದ ನಗೆ' ಅರಳಿರಲೇಬೇಕು.

ಶಾಪ ಕೊಡುವ ಶಕ್ತಿ ಇರುವ ಶಿರೋಮಣಿಯು ರಾಕ್ಷಸನ ಶಿಶ್ನವೇ ಕಲ್ಲಾಗಲಿ ಎಂದು ಶಪಿಸಬಹುದಿತ್ತು. ಆದರೆ, ಆ ಪರಶಿಕ್ಷೆಯ ಕ್ಲೀಷೆಯ ಮಾರ್ಗಕ್ಕೆ ಹೋಗದ ಶಿರೋಮಣಿ ತನ್ನ ದೇಹವನ್ನು ದಂಡಿಸಿಕೊಳ್ಳುತ್ತಾಳೆ. ಅನ್ಯಹಿಂಸೆಗಿಂತಲೂ ಸ್ವಹಿಂಸೆ ನೀಡುವ ಆಘಾತ ಘೋರವಾದದ್ದು. ಈ ರಾಕ್ಷಸ ತನ್ನ ಬದುಕಿನ ಉದ್ದಕ್ಕೂ ಹೆಣ್ಣೊಬ್ಬಳ ಎದುರಿಗೆ ಸೋತುಹೋದ ಅವಮಾನದ ಕಹಿನೆನಪಿನಿಂದ ಕುದಿಯುತ್ತಲೇ ಇರಬೇಕಾಗುತ್ತದೆ! ಹೀಗೆ ಶಾಪ ಕೊಡುವ ಶಕ್ತಿ ನಮ್ಮೆಲ್ಲಾ ಮಹಿಳೆಯರಿಗೆ ಇರಬೇಕಿತ್ತು ಎಂದು ನನಗೆ ಹಲವು ಬಾರಿ ಅನ್ನಿಸುತ್ತದೆ. ಹಾಗಾಗಿದ್ದರೆ ಬಲಾತ್ಕಾರ ಎನ್ನುವುದು ಈ ಜಗತ್ತಿನಲ್ಲೇ ಇರುತ್ತಿರಲಿಲ್ಲ. ನಮ್ಮ ಪುರಾಣದಲ್ಲಿ ದೇಹ ದಂಡಿಸಿ ಮತ್ತೊಬ್ಬರನ್ನು ನೋಯಿಸುವ ಇನ್ನೂ ಹಲವಾರು ಪ್ರಸಂಗಗಳಿವೆ. ಕುರುಡ ಗಂಡನಿಗೆ ತನ್ನನ್ನು ಕಟ್ಟಿ ಕೊಡಲಿದ್ದಾರೆ ಎಂದ ತಕ್ಷಣ ದುಃಖದಿಂದ ತನ್ನ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಾನೂ ಕುರುಡಾಗುವ ಗಾಂಧಾರಿ, ಭೀಷ್ಮ ತನ್ನ ಬದುಕನ್ನು ಹಾಳುಗೆಡವಿದ ಎಂದು ಅಗ್ನಿಗಾಹುತಿಯಾಗುವ ಅಂಬೆ, ಬೆರಳು ಕತ್ತರಿಸಿ ಗುರುದಕ್ಷಿಣೆ ನೀಡುವ ಏಕಲವ್ಯ - ತಕ್ಷಣಕ್ಕೆ ನೆನಪಾಗುತ್ತಾರೆ.

ಸಮರ್ಪಣಾ ಬಂಧನವನ್ನು ಬೆಸೆದುಕೊಂಡು ಭಕ್ತ ಮತ್ತು ದೇವರಲ್ಲಿಯೂ ಈ ದೇಹ ದಂಡನೆಯ ಕ್ರಮ ಯಥೇಚ್ಛವಾಗಿ ಇದೆ. ಭಗವಂತನನ್ನು ಮೆಚ್ಚಿಸುವ ಸಲುವಾಗಿ ಹೆಜ್ಜೆ ನಮಸ್ಕಾರ ಹಾಕುವ, ದಿಂಡುರುಳಿಕೆ ಹಾಕುವ, ಸಿಡಿಯಾಡುವ, ಚಾಟಿ ಬೀಸಿಕೊಳ್ಳುವ ಕ್ರಮಗಳು ಈಗಲೂ ನಮಗೆ ಕಂಡು ಬರುತ್ತವೆ. ನಮ್ಮ ಕರ್ನಾಟಕದ ಇತಿಹಾಸದಲ್ಲಿಯಂತೂ ಕಿರುಬೆರಳ ಕೊನೆಯ ಗೆಣ್ಣನ್ನು ಕತ್ತರಿಸಿಕೊಂಡು ದೇವರ ರಥಕ್ಕೆ ಎಸೆದು ಸಮರ್ಪಿಸುವ ಪದ್ಧತಿ ಎಷ್ಟಿತ್ತೆಂದರೆ, ಬಹುತೇಕರಿಗೆ ಕಿರುಬೆರಳು ಊನವಾಗಿಯೇ ಇರುತ್ತಿತ್ತು ಎಂದು ಇತಿಹಾಸಜ್ಞರು ಹೇಳುತ್ತಾರೆ. ಕೇವಲ ಜನಸಾಮಾನ್ಯರಷ್ಟೇ ಅಲ್ಲ, ರಾಜ-ಮಹಾರಾಜರೂ ಈ ಕ್ರಮವನ್ನು ಅನುಸರಿಸುತ್ತಿದ್ದರೆಂದು ಹೇಳಲಾಗುತ್ತದೆ. ರಕ್ತಪರೀಕ್ಷೆಗಾಗಿ ಸೂಜಿಯಿಂದ ಬೆರಳ ತುದಿ ಚುಚ್ಚಿದರೂ ನೋವೆಂದು ಕಣ್ಣು ಮುಚ್ಚುವ ನಾವು ಈ ವಿಕೃತವನ್ನು ಊಹಿಸಿಕೊಳ್ಳುವುದೂ ಕಷ್ಟ. ಆದರೆ, ಆ ಕಾಲದ ಭಕ್ತಿಯ ತೀವ್ರತೆ ಅತ್ಯಂತ ತೀಕ್ಷ್ಣವಾಗಿರುತ್ತಿತ್ತು. ವೀರ ಭಕ್ತರಂತೂ ತಮ್ಮ ದೇಹದ ಹಲವು ಅಂಗಗಳನ್ನು ಅರ್ಪಿಸುವ, ಕೆಲವೊಮ್ಮೆ ತಲೆದಂಡವನ್ನೇ ಕೊಡುವ ಪದ್ಧತಿಯೂ ಕಂಡು ಬರುತ್ತದೆ. ದೇವರಲ್ಲಿ ಪಾಪಪ್ರಜ್ಞೆ ಮೂಡಿಸಿ, ತಮ್ಮ ಬಯಕೆಗಳನ್ನು ಅಥವಾ ಹರಕೆಗಳನ್ನು ತೀರಿಸಿಕೊಳ್ಳುವ ಕ್ರಮವಿದು. ದೇಹ ದಂಡಿಸಿ, ದೇವರಲ್ಲಿ ಪಾಪಪ್ರಜ್ಞೆ